ಸಿ.ಸಿ .ನಂ.34/2023 ಪಿಡಬ್ಲೂಃ 1

ದಿನಾಂಕಃ 19-10-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ಫಿರ್ಯಾದುದಾರರ ಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆ ಎಂದು ಹಾಗೂ ಫಿರ್ಯಾದುದಾರರನ್ನು ಪಿಡಬ್ಲ್ಯೂ-1 ಎಂದು ಪರಗಣಿಸಲಾಗಿದೆ .

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಯು ಎ ವಕೀಲರಿಂದಃ**

4. ಶಿರಸಿಯಲ್ಲಿರುವ ದಿವಗಿ ಟಿಟಿ ಎಸ್ ಕಂಪನಿಯಲ್ಲಿ ನಾನು 13 ವರ್ಷಗಳಿಂದ ಇಂಜಿನಿಯರ್ ಅಸೆಂಬ್ಲಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನನ್ನ ಸದರಿ ಕೆಲಸ ಪಾಳಿಯಲ್ಲಿರುತ್ತದೆ. ನಾನು ಯಾವ ಯಾವ ತಿಂಗಳಿನಲ್ಲಿ ಯಾವ ಯಾವ ಪಾಳಿಯಲ್ಲಿ ಕೆಲಸ ಮಾಡಿರುತ್ತೇನೆ ಎಂಬ ಬಗ್ಗೆ ಮೇಲೆ ಹೇಳಿದ ಕಂಪನಿಯಲ್ಲಿ ದಾಖಲೆ ಇವೆ ಎಂದರೆ ಸರಿ . ಸದರಿ ಕಂಪನಿಯಲ್ಲಿ ದಿನದ 24 ಗಂಟೆಗಳಲ್ಲಿಯೂ ಕೆಲಸ ನಡೆಯುತ್ತಿರುತ್ತದೆ . ನಾನು ರಾತ್ರಿ ಪಾಳಿಯಲ್ಲಿಯೂ ಸಹ ಕೆಲಸ ಮಾಡುತ್ತಿರುತ್ತೇನೆ . ಕೆಲವು ಸಲ ಭಾನುವಾರವೂ ಸಹ ನಮಗೆ ಕೆಲಸ ಇರುತ್ತದೆ. ನನಗೆ ಸಂಬಳ ಬ್ಯಾಂಕಿನ ಮೂಲಕ ಆಗುತ್ತದೆ. ದಿಃ 11-10-2010 ರಿಂದ ನಾನು ಮೇಲೆ ಹೇಳಿದ ಕಂಪನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಜ್ಞಾನ ಇದೆ ಎಂದರೆ ಸರಿ . ನನ್ನ ಉದ್ಯೋಗಕ್ಕೂ ಆರೋಪಿಯ ಉದ್ಯೋಗಕ್ಕೂ ಯಾವುದೇ ಸಾಮ್ಯತೆ ಇಲ್ಲ ಎಂದರೆ ಸರಿ . ಆರೋಪಿಯು ಕೋರ್ಟಿನಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಹೊರಗಡೆ ಯಾವುದೇ ಉದ್ಯೋಗ ಇಲ್ಲ ಎಂದರೆ ಸಾಕ್ಷಿಯ ಅವರು ಕೋರ್ಟಿನಲ್ಲಿ ಕೆಲಸ ಮಾಡುತ್ತಿರುವುದು ತನಗೆ ಗೊತ್ತು , ಆದರೆ ಅವರಿಗೆ ಹೊರಗಡೆ ಯಾವುದೇ ಉದ್ಯೋಗ ಇಲ್ಲ ಎಂಬ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ .

5. 2013 ನೇ ಇಸವಿಯಲ್ಲಿ ಕುಮಟಾ ಕೋರ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನಾಗೇಶ ನಾಯ್ಕರವರ ಮಗಳನ್ನು ನಾನು ಮದುವೆಯಾಗಿದ್ದು , ಅವರ ಮೂಲಕ ನನಗೆ ಆರೋಪಿಯು ಪರಿಚಯವಾಗಿರುತ್ತಾರೆ. ಸದರಿ ನಾಗೇಶ ನಾಯ್ಕ ರವರು ಕುಮಟಾದ ಸರ್ಕಾರಿ ಅಭಿಯೋಜಕರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ . ನಾನು ಮದುವೆಯಾದ ನಂತರ ನನ್ನ ಮಾವನ ಮನೆಗೆ ಹೋಗಿ ಬಂದು ಮಾಡುತ್ತಿದ್ದೇನೆ . ಒಂದು ದಿವಸ ನನ್ನ ಮಾವನ ಮನೆಯಲ್ಲಿ ಕಾರ್ಯಕ್ರಮ ಇದ್ದಾಗ ನನಗೆ ಆರೋಪಿಯು ಮೊದಲ ಬಾರಿಗೆ ಪರಿಚಯವಾಗಿರುತ್ತಾರೆ . ಆ ರೀತಿ ಆರೋಪಿಯು ನನಗೆ ಪರಿಚಯವಾದ ದಿನಾಂಕ, ತಿಂಗಳು ಹಾಗೂ ಇಸವಿ ನನಗೆ ನೆನಪಿಲ್ಲ . ಆ ರೀತಿ ಪರಿಚಯವಾದ ನಂತರ ನಾನು ನನ್ನ ಉದ್ಯೋಗದಲ್ಲಿ ಆರೋಪಿಯು ಅವರ ಉದ್ಯೋಗದಲ್ಲಿ ಇರುವುದರಿಂದ ನಾವು ಪರಸ್ಪರರೂ ಭೇಟಿಯಾಗುವ ಸಾಧ್ಯತೆ ಇಲ್ಲ ಎಂದರೆ ಸಾಧ್ಯತೆ ಇಲ್ಲ ಎಂರದೆ ಸಾಕ್ಷಿಯು ನಾವು ಭೇಟಿ ಆಗುತ್ತಿದ್ದೆವು ಎಂದು ನುಡಿಯುತ್ತಾರೆ . ಆ ರೀತಿ ನಾನು ಆರೋಪಿಯನ್ನು ನನ್ನ ಮಾವನ ಮನೆಯಲ್ಲಿಯೇ ಭೇಟಿಯಾಗಿರುತ್ತೇನೆ . ಆರೋಪಿಯು ನನ್ನ ಮಾವನ ಮನೆಗೆ ಹೋಗೇ ಇಲ್ಲ ಹಾಗೂ ನನಗೆ ಆರೋಪಿಯ ಪರಿಚಯ ಇಲ್ಲ ಎಂದರೆ ಸರಿಯಲ್ಲ.

6. ಆರೋಪಿಯು ತನಗೆ ದುಡ್ಡು ಬೇಕು ಎಂದು ನನ್ನ ಹತ್ತಿರ 2017 ನೇ ಇಸವಿಯ ಕೊನೆಯ ವಾರದಲ್ಲಿ ಕೇಳಿರುತ್ತಾರೆ. ಆ ರೀತಿ ಆರೋಪಿಯು ದುಡ್ಡು ಬೇಕು ಎಂದು ಫೋನ್ ಮೂಲಕ ನನ್ನನ್ನು ಕೇಳಿರುತ್ತಾರೆ. ಆ ರೀತಿ ಆರೋಪಿಯು ನನ್ನ ಹತ್ತಿರ ದುಡ್ಡು ಕೇಳಿದಾಗ ನಾನು ಈ ಬಗ್ಗೆ ನನ್ನ ಮಾವನಿಗೆ ಹೇಳಿದಾಗ ಅವರು ಆರೋಪಿಯು ಕೋರ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ , ಅವರು ಒಳ್ಳೆಯವರು , ಅವರಿಗೆ ದುಡ್ಡು ಕೊಡುವುದಾದರೆ ಕೊಡಿ ಎಂದು ನನಗೆ ಹೇಳಿರುತ್ತಾರೆ . ಆರೋಪಿಯು ತನಗೆ ಹಣ ಬೇಕು ಎಂದು ನನ್ನ ಎದುರು ಕುಳಿತು ಕೇಳಿಲ್ಲ ಎಂದರೆ ಸರಿ . ನಾನು ದಿಃ 04-01-2018 ರಂದು ಆರೋಪಿಗೆ ಮೂರು ಲಕ್ಷ ರೂಪಾಯಿಯನ್ನು ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ಅದು ನನ್ನ

ಮನೆಯಲ್ಲಿ ಇತ್ತು. ನಾನು ಉಳಿತಾಯ ಮಾಡಿದ ಹಣ , ನನ್ನ ತಂದೆ ನನಗೆ ಪ್ರತಿ ತಿಂಗಳಿಗೆ ಕೊಡುತ್ತಿದ್ದ ಹಣ ಹಾಗೂ ನನ್ನ ಹೆಂಡತಿ ಹೊಲಿಗೆ ಕೆಲಸ ಮಾಡಿ ಉಳಿಸಿದ ಹಣ ಒಟ್ಟೂ ಸೇರಿಸಿ ನಾನು ಸದರಿ ಮೂರು ಲಕ್ಷ ರೂಪಾಯಿಯನ್ನು ಆರೋಪಿಗೆ ಕೊಟ್ಟಿರುತ್ತೇನೆ. ಸದರಿ ಮೂರು ಲಕ್ಷದಲ್ಲಿ ಯಾರ್ಯಾರ್ದ್ದು ಎಷ್ಟೆಷ್ಟು ಹಣ ಎಂದು ನನ್ನ ಫಿರ್ಯಾದಿಯಲ್ಲಿ ಬರೆದಿಲ್ಲ ಎಂದರೆ ಸರಿ . ನಾನು ನನ್ನ ತಂದೆ ತಾಯಿಗೆ ಒಬ್ಬ ಮಗ ಆಗಿದ್ದರಿಂದ ನಾನು ನೌಕರಿಯಲ್ಲಿದ್ದರೂ ಸಹ ನನ್ನ ತಂದೆ ನನಗೆ ಪ್ರತಿ ತಿಂಗಳು ಹಣವನ್ನು ಕೊಡುತ್ತಿದ್ದರು . ನನ್ನ ಪ್ರಕಾರ ಸದರಿ ಮೂರು ಲಕ್ಷ ರೂಪಾಯಿಯನ್ನು ಬ್ಯಾಂಕಿನಿಂದ ತೆಗೆದ ಹಣ ಅಲ್ಲ ಎಂದರೆ ಸರಿ . ಆ ರೀತಿ ನನಗೆ ನನ್ನ ತಂದೆ ಹಣ ಕೊಡುತ್ತಿದ್ದರು ಹಾಗೂ ನನ್ನ ಹೆಂಡತಿಯ ಉಳಿತಾಯದ ಹಣವನ್ನು ಸೇರಿಸಿ ನಾನು ಆರೋಪಿಗೆ ಹಣ ಕೊಟ್ಟಿರುತ್ತೇನೆ ಎಂದು ಇವತ್ತೇ ಪ್ರಪ್ರಥಮವಾಗಿ ಹೇಳುತ್ತಿದ್ದೇನೆ ಎಂದರೆ ಸರಿ .

7. ಕುಮಟಾ ತಾಲೂಕಿನ ಜೀವನಶೈಲಿಗೆ ಮೇಲೆ ಹೇಳಿದ ಮೂರು ಲಕ್ಷ ರೂಪಾಯಿ ಬಹಳ ದೊಡ್ಡ ಮೊತ್ತ ಎಂದರೆ ಸರಿ . ಸದರಿ ಮೂರು ಲಕ್ಷ ರೂಪಾಯಿ ಯಾಕೆ ಬೇಕು ಎಂದು ನಾನು ಆರೋಪಿಯನ್ನು ಕೇಳಿದಾಗ ಅವರು ವೈಯಕ್ತಿಕ ಸಮಸ್ಯೆ ಇದೆ ಎಂದು ಮಾತ್ರ ಹೇಳಿದ್ದು , ಆದರೆ ಆ ಸಮಸ್ಯೆ ಯಾವುದು ಎಂದು ನನಗೆ ಅವರು ಹೇಳಿರುವುದಿಲ್ಲ . ಆರೋಪಿಗೆ ನಾನು ಮೂರು ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ಅದನ್ನು ನೋಡಿದವರು ಯಾರೂ ಇರಲಿಲ್ಲ . ಸದರಿ ಹಣವನ್ನು ಕೊಡುವಾಗ ರಾತ್ರಿ ಸುಮಾರು 8 ಗಂಟೆಯಾಗಿತ್ತು . ನಾನು ಹೇಳಿದ ಸದರಿ ವ್ಯವಹಾರ ನನ್ನ ಮತ್ತು ಆರೋಪಿಯ ನಡುವೆ ಆಗಬೇಕಾದರೆ ನನ್ನ ಸಂಬಳ ಬ್ಯಾಂಕಿನ ಮೂಲಕ ಹಾಗೂ ಆರೋಪಿಯ ಸಂಬಳ ಬ್ಯಾಂಕಿನ ಮೂಲಕ ಆಗುತ್ತಿದ್ದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿ . ಸದರಿ ನಾನು ಹೇಳಿದ ವ್ಯವಹಾರ ನಡೆಯುವ ಸಂದರ್ಭದಲ್ಲಿ ಹಣವನ್ನು ಬ್ಯಾಂಕಿನ ಮುಖಾಂತರ ಆರ್ ಟಿಸಿ ಎಸ್ , ನೆಫ್ಟ್ ಹಾಗೂ ಮನಿ ಟ್ರಾನ್ಸಫರ್ ಹಾಗೂ ಚೆಕ್ ಮೂಲಕ ಹಣವನ್ನು ವರ್ಗಾವಣೆ ಮಾಡುವ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿ . ನಾನು ಆರೋಪಿಗೆ ಹಣ ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ಆರೋಪಿಯಿಂದ ಕರಾರು

ಪತ್ರವನ್ನು ಮಾಡಿಕೊಳ್ಳುವ ಅವಕಾಶ ಇತ್ತು ಎಂದರೆ ಸಾಕ್ಷಿಯು ಅವಕಾಶ ಇತ್ತು , ಆರೋಪಿಯು ಕೋರ್ಟಿನಲ್ಲಿ ಕೆಲಸ ಮಾಡುತ್ತಿದ್ದರಿಂದ ಹಾಗೂ ತನ್ನ ಮಾವ ಆರೋಪಿಯು ಒಳ್ಳೆಯವರೆಂದು ಹೇಳಿದ್ದರಿಂದ ಅವರ ಮೇಲಿನ ನಂಬಿಕೆಯಿಂದ ಆ ರೀತಿ ಕರಾರು ಪತ್ರವನ್ನು ಮಾಡಿಸಿಕೊಳ್ಳಲಿಲ್ಲ ಎಂದು ನುಡಿಯುತ್ತಾರೆ .

8. ಮೇಲೆ ಹೇಳಿದ ಮೂರು ಲಕ್ಷ ರೂಪಾಯಿಯನ್ನು ನಾನು ಆರೋಪಿಗೆ ಕುಮಟಾ ತಾಲೂಕಿನ ಮೂರುಕಟ್ಟೆಯಲ್ಲಿರುವ ಸಿಮ್ಲಾ ಐಸ್ ಕ್ರಿಮ್ ಪಾರ್ಲರ್ ನಲ್ಲಿ ಕೊಟ್ಟಿರುತ್ತೇನೆ . ಆರೋಪಿಯು ಪೋನ್ ಕರೆ ಮಾಡಿ ಸದರಿ ಐಸ್ ಕ್ರೀಮ್ ಪಾರ್ಲರ್ ನಲ್ಲಿ ಹಣ ಕೊಡಿ ಎಂದು ನನಗೆ ಹೇಳಿದ್ದರಿಂದ ನಾನು ಸದರಿ ಜಾಗದಲ್ಲಿ ಅವರಿಗೆ ಹಣವನ್ನು ಕೊಟ್ಟಿರುತ್ತೇನೆ . ಆ ರೀತಿ ಆರೋಪಿಯು ಕರೆ ಮಾಡಿದ ಪೋನ್ ನಂಬರ ನನಗೆ ನೆನಪಿಲ್ಲ . ಆರೋಪಿಯ ಪೋನ್ ಕರೆಯನ್ನು ಸ್ವೀಕರಿಸಿದ ನನ್ನ ಪೋನ್ ನ ಸಿಮ್ ಬದಲಾಗಿದ್ದು , ಆ ನಂಬರವೂ ಸಹ ನನಗೆ ನೆನಪಿಲ್ಲ . ನನ್ನ ಪೋನ್ ನಂಬರನ್ನು ನಾನು ಬರೆದಿಟ್ಟುಕೊಂಡಿಲ್ಲ . ನನ್ನ ಹಾಗೂ ಆರೋಪಿಯ ಪೋನ್ ನ ಕಾಲ್ ರೆಕಾರ್ಡನ್ನು ತೆಗೆಯುತ್ತಾರೆ ಎಂದು ತಿಳಿದುಕೊಂಡು ನಾನು ಪೋನ್ ನಂಬರ ನನಗೆ ನೆನಪಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿಯು ನನಗೆ ಯಾವುದೇ ಪೋನ್ ಕರೆಯನ್ನು ಯಾವುದೇ ಪೋನ್ ನಂಬರಿನಿಂದ ಮಾಡಿಲ್ಲ ಎಂದರೆ ಸರಿಯಲ್ಲ . ಆ ರೀತಿ ಆರೋಪಿಗೆ ಕೊಟ್ಟಿದ್ದೆನು ಎಂದು ಹೇಳಿದ ಮೂರು ಲಕ್ಷ ರೂಪಾಯಿಯಲ್ಲಿ ಯಾವ ಯಾವ ಮುಖಬೆಲೆಯ ಎಷ್ಟೆಷ್ಟು ನೋಟುಗಳು ಇತ್ತು ಎಂದು ನನಗೆ ನೆನಪಿಲ್ಲ .

9. ಆರೋಪಿಯು ನನಗೆ ಚೆಕ್ ನ್ನು ಕೊಟ್ಟಿದ್ದರು ಎಂದು ಹೇಳಿದ ಪೂರ್ವದಲ್ಲಿ ನಾನು ಆರೋಪಿಗೆ ಪೋನ್ ಕರೆ ಮಾಡಿ ಹಣವನ್ನು ಕೊಡಿ ಎಂದು ಕೇಳಿರುವುದಿಲ್ಲ , ನಾನೇ ಖುದ್ದಾಗಿ ಕೋರ್ಟಿಗೆ ಬಂದು ಆರೋಪಿಯನ್ನು ಭೇಟಿ ಮಾಡಿ ನನ್ನ ಹಣವನ್ನು ವಾಪಸ್ಸು ಕೊಡಿ ಎಂದು ಕೇಳಿರುತ್ತೇನೆ . ಆ ರೀತಿ ನಾನು ಆರೋಪಿಯ ಹತ್ತಿರ ಹಣವನ್ನು ಕೇಳಿದಾಗ ನನ್ನ ಜೊತೆಯಲ್ಲಿ ನನ್ನ ಮಾವ ಇರಲಿಲ್ಲ . ಆ ರೀತಿ

ಆರೋಪಿಯ ಹತ್ತಿರ ಅವರು ಕುಮಟಾ ಕೋರ್ಟಿನಲ್ಲಿ ತಮ್ಮ ಕರ್ತವ್ಯವನ್ನು ಮುಗಿಸಿಕೊಂಡು ಹೋಗುವಾಗ ಕೋರ್ಟಿನ ಹೊರಗಡೆ ನನ್ನ ಹಣವನ್ನು ವಾಪಸ್ಸು ಕೊಡಿ ಎಂದು ಕೇಳಿರುತ್ತೇನೆ . ಆ ರೀತಿ ನಾನು ಆರೋಪಿಯ ಹತ್ತಿರ ಕೇಳಿದಾಗ ಅದನ್ನು ಯಾರು ನೋಡಿರುವುದಿಲ್ಲ . ನಿಪಿ-1 ಚೆಕ್ ನ್ನು ಆರೋಪಿಯು ನನಗೆ ಕೊಟ್ಟಾಗ ಯಾರೂ ನೋಡಿರುವುದಿಲ್ಲ . ನಿಪಿ-1 ಚೆಕ್ ನ ಬರವಣಿಗೆಯ ಶಾಯಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ . ಸಾಕ್ಷಿಯು ಮುಂದುವರೆದು ಹೇಳುತ್ತಾರೆ ಸದರಿ ಚೆಕ್ ನ್ನು ಕೊಡಬೇಕಾದರೆ ಅದನ್ನು ಬರೆದುಕೊಂಡೇ ತಂದಿರುತ್ತಾರೆ ಎಂದು .

10. ಈ ಪ್ರಕರಣವನ್ನು ದಾಖಲು ಮಾಡುವ ಪೂರ್ವದಲ್ಲಿ ನಾನು ನನ್ನ ವಕೀಲರ ಮುಖಾಂತರ ಆರೋಪಿಗೆ ನೋಟಿಸು ಕೊಟ್ಟ ತಕ್ಷಣ ಆರೋಪಿಯು ನನ್ನ ವಿರುದ್ಧ ಕುಮಟಾ ಪೋಲಿಸರಿಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಹೇಳುತ್ತಾರೆ ಅದು ಸುಳ್ಳು ದೂರು ಎಂದು . ಸದರಿ ದೂರಿನಲ್ಲಿ ಆರೋಪಿಯು ತನ್ನ ಚೆಕ್ ಕಾಣೆಯಾಗಿದ್ದು , ಅದು ನನಗೆ ಸಿಕ್ಕಿದೆ ಎಂದು ದಿಃ 28-10-2011 ರಂದು ದೂರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದರಲ್ಲಿ ಏನು ಬರೆದಿತ್ತು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಆ ರೀತಿ ಆರೋಪಿ ನನ್ನ ವಿರುದ್ಧ ಪೊಲೀಸರಿಗೆ ಫಿರ್ಯಾದನ್ನು ಕೊಟ್ಟ ನಂತರ ನಾನು ಈ ಕೇಸಿನ ವಕೀಲರೊಂದಿಗೆ ಪೋಲಿಸ್ ಠಾಣೆಗೆ ಹೋಗಿರುತ್ತೇನೆ ಎಂದರೆ ಸಾಕ್ಷಿಯು ತಾನು ಒಬ್ಬನೇ ಹೋಗಿರುತ್ತೇನೆ ಎಂದು ನುಡಿಯುತ್ತಾರೆ . ಪೋಲಿಸ್ ಠಾಣೆಯಲ್ಲಿ ನಾನು ಯಾವುದೇ ಮುಚ್ಚಳಿಕೆಯನ್ನು ಬರೆದುಕೊಟ್ಟಿಲ್ಲ . ನಾನು ಪೋಲಿಸ್ ಠಾಣೆಗೆ ಹೋದಾಗ ಪೋಲಿಸರು ನನಗೆ ಎಲ್ಲಿಂದ ಹಣ ಕೊಟ್ಟಿರಿ ಎಂದು ಪ್ರಶ್ನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಆಮೇಲೆ ನಾನು ಈ ಪ್ರಕರಣವನ್ನು ಕೋರ್ಟಿನಲ್ಲಿ ನೋಡಿಕೊಳ್ಳುತ್ತೇನೆ ಎಂದು ಪೋಲಿಸರಿಗೆ ಹೇಳಿ ಅಲ್ಲಿಂದ ತಪ್ಪಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹೇಳುತ್ತಾರೆ ಪೋಲಿಸ್ ಠಾಣೆಯಲ್ಲಿ ಪೋಲಿಸರು

ನನ್ನನ್ನು ಉದ್ದೇಶಿಸಿ ಆರೋಪಿಯು ಕೋರ್ಟಿನಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರಿಗೆ ನನ್ನ ಹತ್ತಿರ ಸಾಲವನ್ನು ಪಡೆದುಕೊಳ್ಳುವ ಅವಶ್ಯಕತೆ ಇಲ್ಲ ಎಂದರು ನನಗೆ ಹೆದರಿಸಿ ನನ್ನ ಎದೆಗೆ ಕೈ ಹಾಕಿರುತ್ತಾರೆ ಹಾಗೂ ಸದರಿ ಠಾಣೆಯಲ್ಲಿ ಆರೋಪಿಯು ಒಂದು ಪಟ್ಟಿಯನ್ನು ತೋರಿಸಿ ಇಷ್ಟು ಸಾಲಗಳು ತನಗೆ ಇವೆ ಎಂದು ಹೇಳಿರುತ್ತಾರೆ ಎಂದು . ಸದರಿ ಪಟ್ಟಿಯಲ್ಲಿರುವ ಒಂದಾದರೂ ಹೆಸರು ಹೇಳುತ್ತೀರಾ ಎಂದರೆ ಸಾಕ್ಷಿಯು ಆ ಪಟ್ಟಿಗೂ ತನಗೂ ಸ್ವಲ್ಪ ಅಂತರವಿತ್ತು ಎಂದು ನುಡಿಯುತ್ತಾರೆ . ನಾನು ಪೋಲಿಸರಿಗೆ ಕೇಸು ಕೋರ್ಟಿನಲ್ಲಿ ನಡೆಯುತ್ತಿದೆ , ನಾವು ಕೋರ್ಟಿನಲ್ಲಿ ನೋಡಿಕೊಳ್ಳುತ್ತೇವೆ ಎಂದು ಹೇಳಿದಾಗ ಪೋಲಿಸರು ನನ್ನನ್ನು ಕಳುಹಿಸಿಕೊಟ್ಟಿರುತ್ತಾರೆ.

11. ಮೇಲೆ ಹೇಳಿದ ಪೋಲೀಸ್ ಠಾಣೆಯಲ್ಲಿ ಆರೋಪಿಯು ನನ್ನ ಮೇಲೆ ಹೇಳಿದ ಮಾವನ ವಿರುದ್ಧವೂ ಸಹ ಫಿರ್ಯಾದನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ . ನನ್ನ ಮಾವನ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಗೆ ನನ್ನ ಮಾವ ದೂರದ ಸಂಬಂಧಿಯಾಗಿರುತ್ತಾರೆ , ಆದರೆ ನನಗೆ ವರ್ಷ ಗೊತ್ತಿಲ್ಲ . ಸಾಕ್ಷಿಯು ಮುಂದುವರೆದು ಹೇಳುತ್ತಾರೆ ತನ್ನ ಹೆಂಡತಿಯ ತಾಯಿ ತನ್ನ ತಾಯಿಗೆ ದೂರದ ಸಂಬಂಧಿಯಾಗಿರುತ್ತಾರೆ , ಅವರು ತನ್ನ ತಂದೆಗೆ ಸಂಬಂಧಿಕರಲ್ಲ ಎಂದು . ಆರೋಪಿಯು ತನ್ನ ಬ್ಯಾಗನ್ನು ನನ್ನ ಮಾವ ಕೆಲಸ ಮಾಡುತ್ತಿದ್ದ ಕುಮಟಾದ ಸಹಾಯಕ ಸರ್ಕಾರಿ ಅಭಿಯೋಜಕರ ಕಚೇರಿಯಲ್ಲಿ ಇಟ್ಟು ಹೋದಾಗ ನನ್ನ ಮಾವ ಅವರ ಬ್ಯಾಗನಲ್ಲಿದ್ದ ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾದ ಚೆಕ್ ಪುಸ್ತಕವನ್ನು ತೆಗೆದುಕೊಂಡು ನನ್ನ ಮೂಲಕ ಈ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ . ದಿಃ 28-10-2011 ರಂದು ತನ್ನ ಚೆಕ್ ಪುಸ್ತಕ ಕಾಣೆಯಾಗಿದೆ ಎಂದು ಆರೋಪಿಯು ಪೋಲಿಸರಿಗೆ ದೂರನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸಾಕ್ಷಿಯು ಮುಂದುವರೆದು ಹೇಳುತ್ತಾರೆ ಅದು ಸುಳ್ಳು ಎಂದು . ಆ ರೀತಿ ಪೋಲಿಸರಿಗೆ ಫಿರ್ಯಾದನ್ನು ಕೊಟ್ಟ ನಂತರ ಆರೋಪಿಯು ತನ್ನ ಬ್ಯಾಂಕಿಗೆ ಮಾಹಿತಿಯನ್ನು ನೀಡಿ ತನ್ನ ಖಾತೆಯನ್ನು ಬಂದ್ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.